ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಮುಳಬಾಗಿಲು

ಸಿ.ಸಿ.ಸಂಖ್ಯೆಃ 1922/2024

| | | |
|---|---|---|
| ಸಾಕ್ಷಿದಾರರ ಹೆಸರು | ರಮೇಶ್ | ಸಿ.ಡಬ್ಲ್ಯೂಃ 5 |
| ತಂದೆಯ ಹೆಸರು | ರಾಜಪ್ಪ | ಪಿ.ಡಬ್ಲ್ಯೂಃ 5 |
| ವಯಸ್ಸು | 40 ವರ್ಷ | |
| ಉದ್ಯೋಗ | ಬಸ್ ನಿರ್ವಾಹಕ | |
| ವಾಸಸ್ಥಳ | ಮಲ್ಲೇಕುಪ್ಪ ಗ್ರಾಮ | |

ಪ್ರಮಾಣ ವಚನ ಬೋಧಿಸಲಾಯಿತು. ದಿಃ11.11.2024

ಮುಖ್ಯ ವಿಚಾರಣೆಃ ಸಸ.ಅ.ರವರಿಂದಃ /

ಸಾಕ್ಷಿ ನಿಪಿ 2 ರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ನಿಪಿ2 ಕ್ಕೆ ನಾನು ದಿಃ 02.11.2023 ರಂದು ಕಿರುಮಣಿ ಗೇಟ್ ಬಳಿ ವರ್ಷಾ ಡಾಬಾದ ಮುಂದೆ ಅಪಘಾತವಾದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿದಾಗ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೆ ಮಾಡಿರುತ್ತಾರೆ. ಒಂದು ದ್ವಿಚಕ್ರ ವಾಹನ ಮತ್ತು ಅಶೋಕ್ ಲೈಲ್ಯಾಂಡ್ ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿ ನಿಪಿ 3 ರಿಂದ 8 ಅನ್ನು ನೋಡಿ ಅಮಾನತ್ತುಪಡಿಸಿಕೊಂಡ ವಾಹನಗಳು ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್ ಬಿಎ ವಕೀಲರಿಂದಃ**

ನಿಪಿ2 ಕ್ಕೆ ಯಾವ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ನಂಗಲಿ. ಸಾಕ್ಷಿ ಮುಂದುವರೆದು ಅಪಘಾತವಾದ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 2 ರಲ್ಲಿ ಏನು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ದ್ವಿ ಚಕ್ರ ವಾಹನ ಮತ್ತು ಅಶೋಕ್ ಲೈಲ್ಯಾಂಡ್ ವಾಹನದ ಸಂಖ್ಯೆ ಏನು ಎಂದರೆ ಗೊತ್ತಿಲ್ಲ. ಮಹಜರ್ ಮಾಡಲು ಎಷ್ಟು ಜನ ಪೊಲೀಸರು ಬಂದಿರುತ್ತಾರೆ ಎಂದರೆ ಗೊತ್ತಿಲ್ಲ.

ಮಹಜರ್ ಮಾಡಿದಾಗ ಎಷ್ಟು ಜನ ಸೇರಿದ್ದರು ಎಂದರೆ 15 ಜನರು. ಮಹಜರ್ ಗೆ ಎಷ್ಟು ಜನರು ಸಹಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ2 ಅನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ 2 ಅನ್ನು ಬರೆದಿರುವ ಚೆಕ್ಕುಬಂದಿ ಏನು ಎಂದರೆ ಗೊತ್ತಿಲ್ಲ. ನಿಪಿ2 ಜರುಗಿಸಿದ ಸಮಯದಲ್ಲಿ ವಾಹನಗಳು ಎಲ್ಲಿತ್ತು ಎಂದರೆ ಗೊತ್ತಿಲ್ಲ. ವಾಹನಗಳಿಗೆ ಎಲ್ಲೆಲ್ಲಿ ಜಖಂ ಆಗಿತ್ತು ಎಂದರೆ ಗೊತ್ತಿಲ್ಲ. ಅಪಘಾತದ ವಿಚಾರದ ತಿಳಿದುಕೊಂಡು ನಾನೇ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಪೋಲೀಸರು ಬಂದಿರಲಿಲ್ಲ, ನಂತರ ಬಂದಿರುತ್ತಾರೆ. ಪೋಲೀಸ್ ಸಿಬ್ಬಂದಿಯೊಂದಿಗೆ ಬೇರೆ ಯಾರಾದರೂ ಇದ್ದರಾ ಎಂದರೆ ಇಲ್ಲ. ನಿಪಿ2 ಅನ್ನು ಯಾರು ಬರೆದಿರುತ್ತಾರೆ ಎಂದರೆ ಪೊಲೀಸರು ಬರೆದಿರುತ್ತಾರೆ. ಎಲ್ಲಿ ಪುಟಗಳನ್ನು ಪೊಲೀಸರು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ನನಗೆ ಪರಿಚಯ ಇರುತ್ತಾರೆ, ಅವರ ಕುಟುಂಬದವರು ಪರಿಚಯ ಇರುತ್ತಾರೆ. ಮೃತರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು

**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಮುಳಬಾಗಿಲು**

**ಸಿ.ಸಿ.ಸಂಖ್ಯೆ 1922/2024**

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀರಾಮಪ್ಪ | ಸಿ.ಡಬ್ಲ್ಯೂಃ 6 |
| ತಂದೆಯ ಹೆಸರು | ಗೋವಿಂದಪ್ಪ | ಪಿ.ಡಬ್ಲ್ಯೂಃ 6 |
| ವಯಸ್ಸು | 55 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಮಲ್ಲೇಕುಪ್ಪ ಗ್ರಾಮ | |

ಪ್ರಮಾಣ ವಚನ ಬೋಧಿಸಲಾಯಿತು. ದಿಃ11.11.2024

ಮುಖ್ಯ ವಿಚಾರಣೆಃ ಸಸ.ಅ.ರವರಿಂದಃ /

ಸಾಕ್ಷಿ ನಿಪಿ 2 ರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು. ನಿಪಿ2 ಕ್ಕೆ ನಾನು ದಿಃ 02.11.2023 ರಂದು ಕಿರುಮಣಿ ಗೇಟ್ ಬಳಿ ವರ್ಷಾ ಡಾಬಾದ ಮುಂದೆ ಅಪಘಾತವಾದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿದಾಗ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೆ ಮಾಡಿರುತ್ತಾರೆ. ಒಂದು ದ್ವಿಚಕ್ರ ವಾಹನ ಮತ್ತು ಅಶೋಕ್ ಲೈಲ್ಯಾಂಡ್ ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿ ನಿಪಿ 3 ರಿಂದ 8 ಅನ್ನು ನೋಡಿ ಅಮಾನತ್ತುಪಡಿಸಿಕೊಂಡ ವಾಹನಗಳು ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್ ಬಿಎ ವಕೀಲರಿಂದಃ**

ನಿಪಿ2 ಕ್ಕೆ ಯಾವಾಗ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಅಪಘಾತವಾದ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಮೃತರ ಕುಟುಂಬದವರು ನನಗೆ ಕರೆ ಮಾಡಿ ಕರೆಸಿಕೊಂಡಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಇರುವುದಿಲ್ಲ, ನಂತರ ಬಂದಿರುತ್ತಾರೆ. ಯಾವ ವಾಹನದಲ್ಲಿ ಪೋಲೀಸರು ಬಂದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸ್ಥಳದಲ್ಲಿ ಎಷ್ಟು ಜನ ಇದ್ದರು ಎಂದರೆ 20-30. ನಿಪಿ 2 ರಲ್ಲಿ

ಏನು ಬರೆಯಲಾಗಿದೆ  ಎಂದರೆ ಗೊತ್ತಿಲ್ಲ. ನಿಪಿ 2 ಅನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ 2 ಅನ್ನು ಓದಿ ಹೇಳಿರುತ್ತಾರಾ ಎಂದರೆ ಇಲ್ಲ. ವಾಹನಗಳು ಎಲ್ಲಿದ್ದವು ಎಂದರೆ ಗೊತ್ತಿಲ್ಲ. ವಾಹನಗಳಿಗೆ ಎಲ್ಲಿ ಜಖಂ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಅದರ ಸಂಖ್ಯೆ ಗೊತ್ತಿರುವುದಿಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಿಪಿ2 ಅನ್ನು ಪೆನ್ನಿನಲ್ಲಿ ಬರೆದಿರುತ್ತಾರಾ ಎಂದರೆ ಹೌದು.

(ಮರು ವಿಚಾರಣೆ ಇಲ್ಲ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು